ಕ್ರ.ಸಂ.	ವ್ಯಕ್ತಿಗಳ ದರ್ಜೆ	ತೆರಿಗೆ ದರ
2.	ರೂ. 5000/– ಕ್ಕಿಂತ ಜಾಸ್ತಿ ಆದರೆ ರೂ. 8000/– ಕ್ಕಿಂತ ಕಡಿಮೆ	ರೂ. 60/–
3.	ರೂ. 8000/– ಕ್ಕಿಂತ ಜಾಸ್ತಿ ಆದರೆ ರೂ. 10,000/– ಕ್ಕಿಂತ ಕಡಿಮೆ	ರೂ. 100/–
4.	ರೂ. 10,000/– ಕ್ಕಿಂತ ಜಾಸ್ತಿ ಆದರೆ ರೂ. 15000/– ಕ್ಕಿಂತ ಮತ್ತು ಕಡಿಮೆ	ರೂ. 150/–
5.	ರೂ. 15000/– ಕ್ಕಿಂತ ಮತ್ತು ಅದಕ್ಕಿಂತ ಜಾಸ್ತಿ	ರೂ. 200/–

ಆ) ಮಾಹೆಯಾನ ರೂ. 15000/– ಮತ್ತು ಅದಕ್ಕಿಂತ ಜಾಸ್ತಿ ಸಂಬಳ ಅಥವಾ ಕೂಲಿ ಅಥವಾ ಎರಡನ್ನೂ ಸೇರಿ ಪಡೆಯುವವರಿಗೆ ಗರಿಷ್ಟ ರೂ. 200/– ವೃತ್ತಿ ತೆರಿಗೆ ನಿಗದಿಪಡಿಸಲಾಗಿದೆ.

ಇ) ಭಾರತದ ಸಂವಿಧಾನದ ಪ್ರಕಾರ ರಾಜ್ಯ ಸರ್ಕಾರ ಪ್ರತಿ ವರ್ಷ ರೂ. 2500/– ಗಳಿಗಿಂತ ಹೆಚ್ಚಿನ ವೃತ್ತಿ ತೆರಿಗೆಯನ್ನು ವಿಧಿಸಲು ಅಧಿಕಾರ ಹೊಂದಿರುವುದಿಲ್ಲ.

ಮಲೆನಾಡು ಪ್ರದೇಶದಲ್ಲಿ ಸಿ ಅಂಡ್ ಡಿ ಭೂಮಿಯನ್ನು ವರ್ಗೀಕರಿಸುವುದು

217 (165) ಶ್ರೀ ಕುಮಾರಸ್ವಾಮಿ ಎಂ.ಪಿ. (ಮೂಡಿಗೆರೆ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಲೆನಾಡು ಪ್ರದೇಶದಲ್ಲಿ ಸಿ ಮತ್ತು ಡಿ ಭೂಮಿಯನ್ನು ವರ್ಗೀಕರಿಸಿರುವುದು ನಿಜವೇ;

ಆ) ಈ ಭೂಮಿಯನ್ನು ಯಾವ ಆಧಾರದ ಮೇಲೆ ವರ್ಗೀಕರಣ ಮಾಡಲಾಗಿದೆ;

ಇ) ಈ ಭೂಮಿಯು ಮೊದಲು ಯಾವ ಇಲಾಖೆಗೆ ಒಳಪಟ್ಟಿತ್ತು (ವಿವರಗಳನ್ನು ನೀಡುವುದು)?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

ಅ) ಹೌದು.

ಆ) ಸರ್ಕಾರದ ಕೃಷಿ ಮತ್ತು ಭೂ ದಾಖಲೆಗಳ ಇಲಾಖೆವತಿಯಿಂದ ಮಣ್ಣಿನ ಫಲವತ್ತತ್ತೆ ಆಧಾರಿಸಿ ಕೃಷಿ ಯೋಗ್ಯವಲ್ಲದ ಜಮೀನನ್ನು ಸಿ ಮತ್ತು ಡಿ ವರ್ಗದ ಜಮೀನೆಂದು ವರ್ಗೀಕರಿಸಲಾಗಿದೆ.

ಇ) ಈ ಜಮೀನುಗಳು ಗೋಮಾಳ, ಸೊಪ್ಪಿನ ಬೆಟ್ಟ, ಹುಲ್ಲುಬನ್ನಿ, ಖಿರಾಬು ವರ್ಗಕ್ಕೆ ಸೇರಿದ ಕಂದಾಯ ಇಲಾಖೆಯ ವ್ಯಾಪ್ತಿಗೆ ಒಳಪಡುವ ಭೂಮಿಗಳಾಗಿದ್ದವು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಂದಾಯ ಭೂಮಿಯನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸುವುದು

218 (169) ಶ್ರೀ ಕುಮಾರಸ್ವಾಮಿ ಎಂ.ಪಿ. (ಮೂಡಿಗೆರೆ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಿನಾಂಕ 8–6–2002ರಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿನ ಶೃಂಗೇರಿ, ಮೂಡಿಗೆರೆ ಹಾಗೂ ಚಿಕ್ಕಮಗಳೂರು ತಾಲ್ಲೂಕುಗಳ ಸುಮಾರು 1,28,000 ಎಕರೆ ಕಂದಾಯ ಭೂಮಿಯನ್ನು ಅರಣ್ಯ ಇಲಾಖೆಗೆ ಹಸ್ತಾಂತರ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ಭೂಮಿಯನ್ನು ಪುನಃ ಕಂದಾಯ ಇಲಾಖೆಗೆ ಹಸ್ತಾಂತರ ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ; (ವಿವರಗಳನ್ನು ನೀಡುವುದು)?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

ಅ, ಆ) ಜಿಲ್ಲಾಧಿಕಾರಿ, ಚಿಕ್ಕಮಗಳೂರು ಇವರು 1,38,258.19 ಎಕರೆ ಜಮೀನನ್ನು ದಿನಾಂಕ 5–6–2002 ರಂದು ಒಟ್ಟು ಐದು ಅಧಿಸೂಚನೆ ಹೊರಡಿಸಿ, "ಅರಣ್ಯ ಮೀಸಲಾತಿ" ಎಂದು ಘೋಷಿಸಿರುವರು. ಆದರೆ ಸರ್ಕಾರಿ ಆದೇಶ ಸಂ: ಆರ್‌ಡಿ:29:ಎಲ್‌ಜಿಯು:2002ರ ದಿನಾಂಕ 22–10–2002 ರಂದು ಮುಂದಿನ ಆದೇಶದವರೆಗೆ ಜಿಲ್ಲಾಧಿಕಾರಿ ಆದೇಶಗಳನ್ನು ತಡೆಹಿಡಿಯಲಾಗಿದೆ. ಮುಂದಿನ ಕ್ರಮ ಪರಿಶೀಲನೆಯಲ್ಲಿದೆ.

ಪರವಾನಗಿ ಕೊಟ್ಟಿರುವ ಬಾರ್‌ಗಳು ಮತ್ತು ಮದ್ಯದ ಅಂಗಡಿಗಳು

220 (667) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಇದುವರೆಗೆ ಪರವಾನಗಿ ಕೊಟ್ಟಿರುವ ಬಾರ್‌ಗಳು ಮತ್ತು ಮದ್ಯದ ಅಂಗಡಿಗಳ ಸಂಖ್ಯೆ ಎಷ್ಟು; (ಜಿಲ್ಲಾ ಹಾಗೂ ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು);

ಆ) ಇವುಗಳ ಪರವಾನಗಿ ನವೀಕರಣದಿಂದ ಕಳೆದ 3 ವರ್ಷಗಳಲ್ಲಿ ಸರ್ಕಾರಕ್ಕೆ ಬಂದಿರುವ ಆದಾಯ ಎಷ್ಟು; (ವರ್ಷಾವಾರು ವಿವರ ನೀಡುವುದು);

ಇ) ಬಾರ್ ಮತ್ತು ಮದ್ಯದ ಅಂಗಡಿಗಳಿಗೆ ಪರವಾನಗಿ ಕೊಡುವಾಗ ಅನುಸರಿಸುವ ನಿಯಮಗಳೇನು; ಹಾಗೂ ಪರವಾನಗಿ ಮತ್ತು ವಾರ್ಷಿಕ ನವೀಕರಣದ ಶುಲ್ಕ ಎಷ್ಟು;

ಈ) ಶಾಲೆಗಳು, ಪೂಜಾ ಸ್ಥಳಗಳು ಮತ್ತು ವಸತಿ ಸಮುಚ್ಚಯಗಳಲ್ಲಿ ತೆರೆದಿರುವ ಬಾರ್ ಮತ್ತು ಮದ್ಯದ ಅಂಗಡಿಗಳ ಪರವಾನಗಿಯನ್ನು ರದ್ದು ಮಾಡಲು ಕಳೆದ 3 ವರ್ಷಗಳಲ್ಲಿ ಸರ್ಕಾರಕ್ಕೆ ಸಲ್ಲಿಸಿರುವ ದೂರುಗಳ ಸಂಖ್ಯೆ ಎಷ್ಟು;

ಉ) ಈ ದೂರುಗಳ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ಪೂರ್ಣ ವಿವರ ನೀಡುವುದು)?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)

ಅ) ರಾಜ್ಯದಲ್ಲಿ 2004–05ನೇ ಸಾಲಿಗೆ ಇದುವರೆಗೆ ಪರವಾನಗಿ ನೀಡಿರುವ ಸಂಖ್ಯೆ ಕೆಳಕಂಡಂತಿದೆ.

ಮದ್ಯದ ಅಂಗಡಿಗಳು	ಬಾರ್‌ಗಳು
3582	3312

ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ

ಆ) (ಕೋಟಿ ರೂಗಳಲ್ಲಿ)

2001–02	2002–03	2003–04
129.73	145.19	137.89

ಇ) ಕರ್ನಾಟಕ ಅಬಕಾರಿ ಸನ್ನದುಗಳು (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು 1968ರ ನಿಯಮ 5ರನ್ವಯ ಕರ್ನಾಟಕ ಅಬಕಾರಿ ಸನ್ನದು (ಸಾಮಾನ್ಯ ಷರತ್ತುಗಳು) 1967ರ ನಿಯಮ 5ನ್ನು ಓದಿಕೊಂಡಂತೆ

ವಿವರವನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಈ) 292

ಉ) ಈ ರೀತಿ ಸಲ್ಲಿಸಿರುವ ದೂರುಗಳ ಪೈಕಿ ಬಹುತೇಕ ದೂರುಗಳು ಸನ್ನದುದಾರರ ವ್ಯಾಪಾರದ ಪೈಪೋಟಿಯ ಹಿನ್ನೆಲೆ ಹಾಗೂ ಇತ್ಯಾದಿ ಕಾರಣಗಳಿಗಾಗಿ ಸಲ್ಲಿಸಿರುವುದಾಗಿರುತ್ತವೆ. ಆಕ್ಷೇಪಣಾ ಸ್ಥಳಗಳಿಂದ ಮದ್ಯದಂಗಡಿಗಳನ್ನು ಸ್ಥಳಾಂತರಿಸುವಂತೆ ಬಂದಿರುವ 17 ದೂರು ಅರ್ಜಿಗಳ ಬಗ್ಗೆ